ದಿನಾಂಕಃ **29-06-2024** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಶ್ರೀ ಸಿ ಆರ್ ಎನ್ ವಕೀಲರಿಂದಃ

14. ಈ ದಾವೆಯನ್ನು ಚಿಕ್ಕಣ್ಣ ರವರ ವಿರುದ್ಧ ಖಾತೆಯ ಮತ್ತು ದಾಸಪ್ಪರವರಿಗೆ ಆಸ್ತಿ ಬರಬೇಕು ಎಂದು ಕೋರಿ ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತುಗಳಿಗೆ ಮೂಲ ಪುರುಷರು ಚಿಕ್ಕೇಗೌಡ. ಚಿಕ್ಕೇಗೌಡರಿಗೆ 4 ಜನ ಮಕ್ಕಳು,1 ನೇಯವರು, ಕಾಟಯ್ಯ 2 ನೇಯವರು ದಾಸಪ್ಪ, 3 ನೇಯವರು ಚಿಕ್ಕಣ್ಣ ಮತ್ತು 4 ನೇಯವರು ತಿಮ್ಮಯ್ಯ. ಕಾಟಯ್ಯನವರಿಗೆ ಇಬ್ಬರು ಮಕ್ಕಳು ಅವರ ಹೆಸರುಗಳು ಗಿರಿಯಪ್ಪ ನಾನು ಮತ್ತು ಮಹಾಲಿಂಗಯ್ಯ ಅವರಿಗೆ ಹೆಣ್ಣು ಮಕ್ಕಳು ಇಲ್ಲ. ದಾಸೇಗೌಡರಿಗೆ ಇಬ್ಬರು ಮಕ್ಕಳು ಚಿಕ್ಕಣ್ಣ ಮತ್ತು ಶಿವಮ್ಮ. ಶಿವಮ್ಮ ರವರು ಮೃತಪಟ್ಟಿರುತ್ತಾರೆ. ಶಿವಮ್ಮರವರಿಗೆ ಮದುವೆ ಆಗಿದೆ ಅವರ ಗಂಡ ಕೂಡ ಈಗ ಜೀವಂತವಾಗಿ ಇಲ್ಲ ಶಿವಮ್ಮ ರವರಿಗೆ 4 ಜನ ಮಕ್ಕಳು ಎಂದು ಹೇಳಿದ ನಂತರ ಗೊತ್ತಿಲ್ಲ ಎಂದು ನುಡಿಯುತ್ತಾರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ. ಚಿಕ್ಕಣ್ಣ ರವರ ಹೆಂಡತಿ ಹೆಸರು ಚಿತ್ತಮ್ಮ. ಚಿತ್ತಮ್ಮ ರವರ ತಂಗಿ ಗಿರಿಯಮ್ಮ ನನಗೆ ಗೊತ್ತು. ನಾಗರತ್ನಮ್ಮ ಗಿರಿಯಮ್ಮ ರವರ ಮಗಳು ಎಂದರೆ ಸರಿ. ಗಿರಿಯಮ್ಮರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ನಾಗರತ್ನಮ್ಮ ರವರ ಅಕ್ಕನಾದ ಸುಜಾತರವರನ್ನು ಅಣ್ಣಮಲ್ಲೇನಹಳ್ಳಿಗೆ ಕೊಟ್ಟು ಮದುವೆ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

15. ನಾಗರತ್ನಮ್ಮ ರವರು ಚಿಕ್ಕವಯಸ್ಸಿನಿಂದ ಅಣ್ಣಮಲ್ಲೇನಹಳ್ಳಿಯಲ್ಲಿ ಬೆಳೆದು ವಿದ್ಯಾಭ್ಯಾಸ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಅದರ ಬಗ್ಗೆ ಗೊತ್ತಿಲ್ಲ ಎನ್ನುತ್ತಾರೆ. ನಾಗರತ್ನಮ್ಮ ರವರು ಗುಡಿಗೊಂಡನಹಳ್ಳಿಗೆ ಸೇರಿದವರು ಅದು ಅವರ ತಂದೆಯ ಮನೆ. ನಾಗರತ್ನಮ್ಮ ರವರು ಮಲ್ಲಿಗೆರೆಗೆ ಕೊಟ್ಟು ಮದುವೆ ಮಾಡಿಸಿರುತ್ತಾರೆ. ಚಿಕ್ಕನಾಯಕನಹಳ್ಳಿ ತಾಲೂಕು ಹಂದನಕೆರೆ ಹೋಬಳಿ ಎಂದರೆ ಸರಿ. ನಾನು ದಾವೆ ಹೂಡುವಾಗ 1 ನೇ ಪ್ರತಿವಾದಿ ಯಾವ ಊರಿನಲ್ಲಿ ಇದಾರೆ ಎಂದು ವಿಳಾಸವನ್ನು ತೋರಿಸಿದೀರಾ ಎಂದರೆ ಸಾಕ್ಷಿ ಅಣ್ಣಮಲ್ಲೇನಹಳ್ಳಿ ಯಲ್ಲಿ ವಾಸವಿರುತ್ತಾರೆ ಎಂದು ತೋರಿಸಿರುತ್ತೇನೆ. ಅವರು ಎಷ್ಟು ವರ್ಷದಿಂದ ಅಲ್ಲಿ ವಾಸವಿದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ತಿಳುವಳಿಕೆ ಬಂದ ದಿನದಿಂದ 1 ನೇ ಪ್ರತಿವಾದಿಯವರು ಅಲ್ಲೇ ವಾಸವಿದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅಣ್ಣಮಲ್ಲೇನಹಳ್ಳಿಯಲ್ಲಿ ಯಾವ ಮನೆಯಲ್ಲಿ 1 ನೇ ಪ್ರತಿವಾದಿಯವರು ವಾಸವಿದಾರೆ ಎಂದು ಪ್ರಶ್ನಿಸಿದಾಗ ಸಾಕ್ಷಿ ಸರ್ಕಾರಿ ಜಾಗದಲ್ಲಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದು ಉತ್ತರ ನೀಡಿರುತ್ತಾರೆ. ಚಿಕ್ಕಣ್ಣ ಮತ್ತು ಚಿತ್ತಣ್ಣ ಆ ಮನೆಯಲ್ಲಿ ವಾಸವಿದ್ದರು ಎಂದರೆ ಸಾಕ್ಷಿ ಅವರು ಇದ್ದ ಮನೆ ಹಾಳು ಬಿದ್ದಿತ್ತು ಎಂದು ನುಡಿಯುತ್ತಾರೆ. ಚಿಕ್ಕಣ್ಣ ವಾಸವಿರುವ ಮನೆ ನನ್ನ ತಂದೆ ಮತ್ತು ಅವರೆಲ್ಲಾ ವಿಭಾಗ ಮಾಡಿಕೊಂಡು ವಿಭಾಗ ಪತ್ರದ ಮೂಲಕ ಅವರಿಗೆ ಕೊಟ್ಟಿರುವ ಮನೆ ಎಂದರೆ ಸಾಕ್ಷಿ ಭಾಗ

ಮಾಡಿಕೊಂಡಿಲ್ಲ ಅದು ಒಟ್ಟು ಕುಟುಂಬದ ಆಸ್ತಿ ಎನ್ನುತ್ತಾರೆ. ಚಿಕ್ಕೇಗೌಡರ 4 ಮಕ್ಕಳು ಪ್ರತ್ಯೇಕವಾಗಿ ವಾಸವಿದಾರೆ ಎಂದರೆ ಸಾಕ್ಷಿ ಒಟ್ಟು ಕುಟುಂಬದಲ್ಲೇ ಇದಾರೆ ಎನ್ನುತ್ತಾರೆ. ನಾವು ಇಲ್ಲಿಯವರೆಗೂ ಒಟ್ಟು ಕುಟುಂಬದಲ್ಲೇ ವಾಸವಿದೀವಿ ನಾವು ವಿಭಾಗ ಮಾಡಿಕೊಂಡಿಲ್ಲ. ನಾವು ಒಟ್ಟು ಕುಟುಂಬದಲ್ಲಿ ವಾಸವಿದೀವಿ ಎಂದು ತೋರಿಸಿ ಆಧಾರ ಕಾರ್ಡ ಮತ್ತು ಪಡಿತರ ಚೀಟಿಯನ್ನು ಹಾಜರು ಪಡಿಸಿದೀರಾ ಎಂದರೆ ಸಾಕ್ಷಿ ಹಾಜರು ಪಡಿಸಿರುವುದಿಲ್ಲ ಎನ್ನುತ್ತಾರೆ.

16. ನಾನು ಪಡಿತರ ಚೀಟಿಯನ್ನು ಹೊಂದಿರುತ್ತೇನೆ. ಸದರಿ ಪಡಿತರ ಚೀಟಿಯಲ್ಲಿ ಯಜಮಾನರು ನಮ್ಮ ಕುಟುಂಬದ ಬಗ್ಗೆ ಮಾತ್ರ ನಮೂದಾಗಿದೆ ನಮ್ಮ ಕುಟುಂಬದಲ್ಲಿ ಗಿರಿಯಪ್ಪ, ನೀಲಮ್ಮ, ಮಹಾಲಿಂಗಯ್ಯ, ಧ್ರಾಕ್ಷಾಯಣಮ್ಮ, ಕಾಂತಮ್ಮ, ಉಮೇಶ್, ಅಭಿಶೇಕ್, ಶಶಿಧರ ಅವರ ಹೆಸರುಗಳು ಪಡಿತರ ಚೀಟಿಯಲ್ಲಿ ನಮೂದಾಗಿದೆ. ಮೇಲೆ ಹೇಳಿರುವ ವ್ಯಕ್ತಿಗಳು ಕಾಟಯ್ಯರವರ ವಂಶಕ್ಕೆ ಸೇರಿದವರು ಎಂದರೆ ಸರಿ. ದಾಸೇಗೌಡರು ಅವರ ಕುಟುಂಬಸ್ಥರು ಪ್ರತ್ಯೇಕವಾಗಿ ವಾಸವಿದ್ದು ಅವರ ಹೆಸರುಗಳಲ್ಲಿ ಪಡಿತರ ಚೀಟಿಯನ್ನು ಹೊಂದಿರುತ್ತಾರೆ ಎಂದರೆ ಸರಿ. ನಾವು ಬೇರೆ ಮನೆಯಲ್ಲಿ ವಾಸವಿದೀವಿ ಅದೇ ರೀತಿ ದಾಸೇಗೌಡರ ಕುಟುಂಬಸ್ಥರು ಕೂಡ ಬೇರೆ ಮನೆಯಲ್ಲಿ ವಾಸವಿದಾರೆ ಎಂದರೆ ಸರಿ. ದಾವಾ ಸರ್ವೆ ನಂಬರ್ ಗಳು ಅದರ ವಿಸ್ತೀರ್ಣ ಮತ್ತು ಚೆಕ್ಕುಬಂಧಿ ಹೇಳಬಹುದಾ ಎಂದರೆ ಸಾಕ್ಷಿ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಗೊತ್ತು ಚೆಕ್ಕುಬಂಧಿ ನನಗೆ ಹೇಳಲು ಸಾಧ್ಯ ಇಲ್ಲ. ಸರ್ವೆ ನಂ. 11/1 ರಲ್ಲಿ 2 ಎಕರೆ 22 ಗುಂಟೆ, 11/3 ರಲ್ಲಿ 4 ಎಕರೆ 26 ಗುಂಟೆ ಇದೆ, ಸರ್ವೆ ನಂ. 5/6 ರಲ್ಲಿ 23 ಗುಂಟೆ ಇದೆ. ಒಟ್ಟು ಕುಟುಂಬದ ಆಸ್ತಿಗಳು ದಾವಾ ಸ್ವತ್ತು ಮಾತ್ರ ಇದೆ . ಮನೆಗಳಲ್ಲಿ ನಾವು ಬೇರೆ ಬೇರೆ ವಾಸವಿದೀವಿ. ಒಟ್ಟು 4 ಮನೆಗಳು ಇವೆ. ಕಾಟಯ್ಯ, ದಾಸಪ್ಪ, ಚಿಕ್ಕಣ್ಣ ಮತ್ತು ತಿಮ್ಮಯ್ಯ ರವರು ಬೇರೆ ಬೇರೆ ಮೆಲೆ ಹೇಳಿರುವ 4 ಮನೆಗಳಲ್ಲಿ ವಾಸವಿದಾರೆ ಎಂದರೆ ಸರಿ. ಎಷ್ಟು ವರ್ಷದಿಂದ ಬೇರೆಬೇರೆ ವಾಸವಿದಾರೆ ಎಂದರೆ ಅವರು ನಮ್ಮ ಅಜ್ಜನ ಕಾಲದಿದಂದಲೂ ಬೇರೆ ಬೇರೆ ವಾಸವಿದಾರೆ.

17. ನಾನು 1 ನೇ ತರಗತಿವರೆಗೆ ಓದಿರುತ್ತೇನೆ. ದಾವಾ ಐಟಂ ನಂ. 2 ಸರ್ವೆ ನಂ. 11/3 ಪಶ್ಚಿಮ ದಿಕ್ಕಿನಲ್ಲಿ ತಿಮ್ಮಯ್ಯ ಎಂದು ನಮೂದಾಗಿದೆ ಅದು ನನ್ನ ಚಿಕ್ಕಪ್ಪ ತಿಮ್ಮಯ್ಯರವರ ಆಸ್ತಿ ಎಂದರೆ ಸರಿ. ಕೇಸು ಹೂಡುವ ಮುಂಚೆ ದಾವಾ ಸ್ವತ್ತಿನ ಚೆಕ್ಕುಬಂಧಿಗಳ ವಿವರಗಳನ್ನು ನಾನೇ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಸಾಕ್ಷಿಗೆ ಚೆಕ್ಕುಬಂಧಿ ಹೇಳಿದ ನಂತರ ಆ ಚೆಕ್ಕುಬಂಧಿಯನ್ನು ನಾನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಾಸಪ್ಪರವರ ಚಿಕ್ಕೇಗೌಡರವರ 2 ನೇ ಮಗ ಎಂದರೆ ಸರಿ. ತಿಮ್ಮಯ್ಯ 4 ನೇ ಮಗ ಎಂದರೆ ಸರಿ. ಸಾಕ್ಷಿಗೆ ದಾವಾ ಆಸ್ತಿಗಳಲ್ಲಿ ಕೊಟ್ಟಿರುವ ಚೆಕ್ಕುಬಂಧಿಗಳನ್ನು ಓದಿ ಹೇಳಿದ ನಂತರ ನಾವು ಚೆಕ್ಕುಬಂಧಿಗಳನ್ನು ಕೊಟ್ಟಿಲ್ಲ ಎಂದು ಪುನಃ ನುಡಿಯುತ್ತಾರೆ. ಐಟಂ ನಂ.1 ರ ದಕ್ಷಿಣಕ್ಕೆ 1 ನೇ ಪ್ರತಿವಾದಿಗೆ ಇರುವ ಜಮೀನು ಮತ್ತು ಉತ್ತರಕ್ಕೆ ತಿಮ್ಮಯ್ಯರವರ ಜಮೀನು ಅದು ಆದ ನಂತರ ಅದರ ಉತ್ತರಕ್ಕೆ ಗೌರಮ್ಮರವರ ಜಮೀನು ಎಂದರೆ ಚೆಕ್ಕುಬಂಧಿಯನ್ನು ನಾವು ಹಾಕಿಲ್ಲ

ಎನ್ನುತ್ತಾರೆ. ನಾನು ದಾವಾ ಆಸ್ತಿಗಳಿಗೆ ಕೊಟ್ಟಿರುವ ಜಮಿನಿನಲ್ಲಿ ನಾಗರತ್ನಮ್ಮ ಅನುಭದಲ್ಲಿ ಇದಾರೆ ಎಂದರೆ ಸಾಕ್ಷಿ ಚೆಕ್ಕುಬಂಧಿಯನ್ನು  ನಾವು ಕೊಟ್ಟಿಲ್ಲ ಎನ್ನುತ್ತಾರೆ. ಪಹಣಿಯನ್ನು ತೆಗೆಯುವಾಗ 1 ನೇ ಪ್ರತಿವಾದಿಯ ಹೆಸರಿನಲ್ಲಿ ಖಾತೆ ಇರುವುದು ನನಗೆ ಗೊತ್ತಾಯಿತು. ಎಷ್ಟನೇ ಸಾಲಿನಿಂದ ಪಹಣಿ 1 ನೇ ಪ್ರತಿವಾದಿಯ ಹೆಸರಿಗೆ ಬರುತ್ತಿದೆ ಎಂದರೆ ಸಾಕ್ಷಿ 2 ವರ್ಷ ಹಿಂದೆ ನೋಡಿರುತ್ತೇನೆ.  ಯಾವ ಆಧಾರದ ಮೇರೆಗೆ 1 ನೇ ಪ್ರತಿವಾದಿಯ ಹೆಸರಿಗೆ ಪಹಣಿ ಬಂದಿದೆ ಎಂದು ನಾನು ತಿಳಿದುಕೊಂಡಿಲ್ಲ. ಅವರ ಹೆಸರಿಗೆ ಖಾತೆ ಹೇಗೆ ಬಂನತು ಎಂದು ನಾನು ರೆವಿನ್ಯೂ ಅಧಿಕಾರಿ ಹತ್ತಿರ ಪರಿಶೀಲನೆ ಮಾಡಿರುವುದಿಲ್ಲ. ನನಗೆ ಅವರ ಹೆಸರಿಗೆ ಖಾತೆ ಇದೆ ಎಂದು ತಿಳಿದುಕೊಂಡ ನಂತರ ರೆವಿನ್ಯೂ ಅಧಿಕಾರಿಗಳ ಹತ್ತಿರ ತಕರಾರು ಅರ್ಜಿಯನ್ನು ನಾನು ಸಲ್ಲಿಸಿರುವುದಿಲ್ಲ.

ಈ ಹಂತದಲ್ಲಿ ಶ್ರೀ ಸಿ ಆರ್ ಎನ್ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು
ತಿಪಟೂರು.